ವಿ-330
ಕ್ರ -56 ರಂಘನಾಥ್

## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ 330 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಕುರಿತು.**

**ಪ್ರಶ್ನೆ:**

ಸಮಾಜ ಕಲ್ಯಾಣ ಇಲಾಖೆಯ ಅಂಗ ಸಂಸ್ಥೆಯಾದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಹೊರಗುತ್ತಿಗೆ/ಜಿಲ್ಲಾ ಪಂಚಾಯತ್ ಮೂಲಕ 2004-05 ರಿಂದ 2010-11 ನೇ ಸಾಲಿನವರೆಗೆ ಕಾರ್ಯನಿರ್ವಹಿಸಿದ್ದ ಪ್ರಾಂಶುಪಾಲರು ಹಾಗು ಸಹಶಿಕ್ಷಕರಿಗೆ ವಯೋಮಿತಿ ಸಡಿಲಿಕೆ ಕೃಪಾಂಕ ನೀಡಿ ಅಂತಿಮ ಆಯ್ಕೆ ಪಟ್ಟಿಯಲ್ಲಿದ್ದ 06 ಅಭ್ಯರ್ಥಿಗಳನ್ನು ಮೂಲ ದಾಖಲೆಗಳ ಪರಿಶೀಲನೆ ಮಾಡಿದ್ದು, ಅದರಲ್ಲಿ ವೆಂಕಟೇಶ್.ಸಿ ಎನ್ನುವ ದೈಹಿಕ ಶಿಕ್ಷಕರಿಗೆ ದಿ: 10.12.2016 ರಲ್ಲಿ ನೇಮಕಾತಿ ಮಾಡಲಾಗಿದೆ. ಉಳಿದ ವಯೋಮಿತಿ ಮೀರಿದ ಪ್ರಾಂಶುಪಾಲರು ಸಹ ಶಿಕ್ಷಕರ ಖಾಯಂಮಾತಿ ಬಗ್ಗೆ ಸಂಘದ 73 ಹಾಗೂ 74 ನೇ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಇಲಾಖಾ ಅಧಿಕಾರಿಗಳು ಉಳಿದ ಅಭ್ಯರ್ಥಿಗಳ ಖಾಯಂಮಾತಿ ಬಗ್ಗೆ ಕಡತವನ್ನು ಸಂಬಂಧಿಸಿದ ಸಚಿವರ ಅನುಮೋದನೆಗೆ ಕಳುಹಿಸದೇ ವಿನಾ ಕಾರಣ ವಿಳಂಬ ಮಾಡುತ್ತಿದ್ದು ವೆಂಕಟೇಶ್ . ಸಿ ದೈಹಿಕ ಶಿಕ್ಷಕ ಇವರ ಖಾಯಂಮಾತಿಯಂತೆ ಉಳಿದ ಅಭ್ಯರ್ಥಿಗಳಿಗೆ ಕೃಪಾಂಕ ಮತ್ತು ವಯೋಮಿತಿ ಸಡಿಲಿಕೆ ಮಾಡಿ ಖಾಯಂಗೊಳಿಸಬೇಕೆಂಬ ವಿಷಯವನ್ನು ನಿಯಮ 72 ರಲ್ಲಿ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಇಲಾಖೆ ಸಚಿವರ ಗಮನ ಸೆಳೆಯುತ್ತೇನೆ.

**ಉತ್ತರ:**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ 830 ವಸತಿ ಶಾಲೆ/ ಕಾಲೇಜುಗಳು (ಪರಿಶಿಷ್ಟ ಜಾತಿ-503, ಪರಿಶಿಷ್ಟ ವರ್ಗ-156, ಹಿಂದುಳಿದವರ್ಗ-171) ಕಾರ್ಯನಿರ್ವಹಿಸಿ ಕೇಂದ್ರ ದಾಖಲಾತಿ ಘಟಕ (CAC) ನೇರ ನೇಮಕಾತಿಗೆ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಾಗವಹಿಸಿದ ಹೊರಸಂಪನ್ಮೂಲ ಪ್ರಾಂಶುಪಾಲರು ಮತ್ತು ಸಹ ಶಿಕ್ಷಕರುಗಳಿಗೆ ಮಾನ್ಯ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ: 20204/ 2011 ಹಾಗೂ ಸಂಯೋಜಿತ ಪ್ರಕರಣಗಳಿಗೆ ಸಂಬಂಧಿಸಿದಂತೆ, ದಿನಾಂಕ:13.07.2012 ರ ಆದೇಶದಲ್ಲಿ ನಿರಂತರ ಸೇವೆ ಸಲ್ಲಿಸಿದ ಅಭ್ಯರ್ಥಿಗಳಿಗೆ ವಾರ್ಷಿಕ 5% ರಷ್ಟು ಕೃಪಾಂಕ ನೀಡಲು ಆದೇಶಿಸಲಾಗಿರುತ್ತದೆ. ಅದರಂತೆ ಅರ್ಹ ಪ್ರಾಂಶುಪಾಲರು ಮತ್ತು ಶಿಕ್ಷಕರಿಗೆ ಕೃಪಾಂಕ ನೀಡಲಾಗಿರುತ್ತದೆ.

ಆಯ್ಕೆ ಗೊಂಡ ಅಭ್ಯರ್ಥಿಗಳ ಪೈಕಿ ಶ್ರೀ ವೆಂಕಟೇಶ್ ಸಿ. ದೈಹಿಕ ಶಿಕ್ಷಣ ಶಿಕ್ಷಕರ ಕೇಂದ್ರ ದಾಖಲಾತಿ ಘಟಕ (CAC) ಪ್ರಕಟಿಸಿದ ಫಲಿತಾಂಶ ಪಟ್ಟಿಯಲ್ಲಿ ಸದರಿಯವರ ಫಲಿತಾಂಶ (Below Cut off ) ಎಂದು ಪ್ರಕಟಣೆಯಾಗಿರುತ್ತದೆ. ಆದ್ದರಿಂದ ಸದರಿ ಅಭ್ಯರ್ಥಿಗೆ ಸೇವೆಗೆ ಸಲ್ಲಿಸಿದ ಶೈಕ್ಷಣಿಕ ವರ್ಷಕ್ಕೆ 5% ರರತೆ ಕೃಪಾಂಕ ನೀಡಿ ನೇಮಕಾತಿ ಆದೇಶ ನೀಡಲಾಗಿದೆ. ವಯೋಮಿತಿ ಮೀರಿದ 05 ಅಭ್ಯರ್ಥಿಗಳಾದ ಶ್ರೀ ಚಿದಾನಂದ ಮಲ್ಲಪ್ಪ ಅದಿಗೊಂಡೆ ಮತ್ತು ಸುರೇಶ್ ಗಣಿತ ಶಿಕ್ಷಕರು, ರಾಜೇಶ್ವರಮ್ಮ ಹಿಂದಿ ಭಾಷಾ ಶಿಕ್ಷಕರು, ಚಂದ್ರಶೇಖರ್ ಎಸ್. ಆಂಗ್ಲ ಭಾಷಾ ಶಿಕ್ಷಕರು,

ಎಸ್ ಕೆ ರಮೇಶ್ ಪ್ರಾಂಶುಪಾಲರು, ರವರ ಫಲಿತಾಂಶ ಪಟ್ಟಿಯಲ್ಲಿ ( Over Age ) ಎಂದು ಪ್ರಕಟಿಸಲಾಗಿರುತ್ತದೆ.

ವಯೋಮಿತಿ ಮೀರಿದ ಸದರಿ 05 ಅಭ್ಯರ್ಥಿಗಳ ಪೈಕಿ ಶ್ರೀ ಚಿದಾನಂದ ಮಲ್ಲಪ್ಪ ಅದಿಗೊಂಡೆ ಗಣಿತ ಹೊರಸಂಪನ್ಮೂಲ ಶಿಕ್ಷಕರು ರವರು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ ರಿಟ್ ಸಂಖ್ಯೆ: 54499/2015 ರಲ್ಲಿ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣವನ್ನು ಆಲಿಸಿದ ಮಾನ್ಯ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿರುತ್ತದೆ.

" I hold that the petition is entitled for consideration of age relaxation. In view of the discussion made above, the respondents are directed to consider to relax the age and by giving service benefit as regards petitioner is concerned"

ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಆದೇಶವನ್ನು ಉಲ್ಲೇಖಿಸಿ ವಯೋಮಿತಿ ಮೀರಿದ ಸದರಿ 05 ಅಭ್ಯರ್ಥಿಗಳನ್ನು ಒಳಗೊಂಡಂತೆ OMR ನ್ಯೂನತೆ ಹೊಂದಿದ ಅಭ್ಯರ್ಥಿಗಳ ವಿವರಗಳನ್ನು ಸಂಘದ 71 ಮತ್ತು 73 ನೇ ಆಡಳಿತ ಮಂಡಳಿಯ ಸಭೆಯಲ್ಲಿ ವಿಷಯವನ್ನು ಮಂಡಿಸಲಾಗಿರುತ್ತದೆ. 05 ಜನ ವಯೋಮಿತಿ ಮೀರಿದ ಅಭ್ಯರ್ಥಿಗಳನ್ನು ಒಳಗೊಂಡಂತೆ ಒಟ್ಟು 35 OMR ನ್ಯೂನತೆ ಹೊಂದಿದ ಅಭ್ಯರ್ಥಿಗಳ ವಿವರಗಳ ಕುರಿತಂತೆ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ. ಈ ಪೈಕಿ 09 ಅಭ್ಯರ್ಥಿಗಳ ದಾಖಲಾತಿಗಳನ್ನು ಪುನರ್ ಪರಿಶೀಲಿಸುವಂತೆ, 21 ಅಭ್ಯರ್ಥಿಗಳು ಸೇವಾ ಕೃಪಾಂಕಕ್ಕೆ ಅನರ್ಹಗೊಂಡಿರುವುದರಿಂದ ಅವರನ್ನು ನೇಮಕಕ್ಕೆ ಪರಿಗಣಿಸದೇ ಹಿಂಬರಹ ನೀಡುವಂತೆ ಹಾಗೂ 05 ವಯೋಮಿತಿ ಮೀರಿದ ಅಭ್ಯರ್ಥಿಗಳ ಪೈಕಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದ ಶ್ರೀ ಚಿದಾನಂದ ಮಲ್ಲಪ್ಪ ಅದಿಗೊಂಡೆ, ಗಣಿತ ಹೊರಸಂಪನ್ಮೂಲ ಶಿಕ್ಷಕರು ರವರನ್ನು ಮಾತ್ರ ಕೃಪಾಂಕಕ್ಕೆ ಪರಿಗಣಿಸಿ ನೇಮಕಾತಿ ಆದೇಶ ಹೊರಡಿಸುವಂತೆ ಹಾಗೂ 04 ಜನ ಅಭ್ಯರ್ಥಿಗಳಿಗೆ ವಯೋಮೀತಿ ಸಡಿಲಿಸಲು ನಿಯಮಗಳಲ್ಲಿ ಅವಕಾಶವಿಲ್ಲವಾದ್ದರಿಂದ ಅವರಿಗೆ ಹಿಂಬರಹ ನೀಡಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ದಿ:06.08.2021 ರಲ್ಲಿ ತಾತ್ಕಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ, ಸ್ವೀಕೃತವಾದ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಹಿಂಬರಹವನ್ನು ನೀಡಲಾಗಿರುತ್ತದೆ. ದಿನಾಂಕ: 06.09.2021 ರಂದು ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ನಂತರ ನೇಮಕಾತಿ ಆದೇಶವನ್ನು ಹೊರಡಿಸಲಾಗಿರುತ್ತದೆ.

**ಸಕಇ 476 ಎಂಡಿಎಸ್ 2022**

**(ಕೋಟ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು